ಉಪಾಧ್ಯಕ್ಷರು : ನಾನೀಗ ಮುಕ್ತಾಯ ವೇಳೆಗೆ ಬಂದಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದೇ ಒಂದು ಬಹಳ ಪ್ರಮುಖವಾದಂತಹ ವಿಷಯ ಇದೆ.

ಉಪಾಧ್ಯಕ್ಷರು : ಈಗ ಪ್ರಾರಂಭ ಮಾಡಿದರೆ ಮುಗಿಯುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಭಾಷಣ ಅಲ್ಲ, ಸಾರ್.

ಶ್ರೀ ಆರ್.ವಿ. ದೇಶಪಾಂಡೆ : ಸಾರ್, ನಾಳೆಯೂ ಸದನ ಇದೆ. ಇವತ್ತೇ ಎಲ್ಲಾ ಮುಗಿಸಬೇಕು ಎಂದೇನಿಲ್ಲ. ತಾವು ಅಜೆಂಡಾ ಪ್ರಕಾರ ಹೋದರೆ ಬಹಳ ಒಳ್ಳೆಯದಾಗುತ್ತದೆ.

ಉಪಾಧ್ಯಕ್ಷರು : ನಾಳೆ ತೆಗೆದುಕೊಳ್ಳಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇವತ್ತೇ ಬಹಳ ಮುಖ್ಯವಾಗಿ ಪ್ರಸ್ತಾಪಿಸ ಬೇಕಾದಂತಹದು.

ಉಪಾಧ್ಯಕ್ಷರು : ಇಲ್ಲ, ಇಲ್ಲ, ನಾವು ಶೂನ್ಯ ವೇಳೆ ವಿಚಾರ ಪ್ರಾರಂಭ ಮಾಡುವ ಹಾಗೆಯೇ ಇಲ್ಲ. ಶೂನ್ಯ ವೇಳೆ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಟೈಮ್ ಆಗಿರುವುದರಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಉಪಾಧ್ಯಕ್ಷರೆ, ಕನ್ನಡದ ಕಗ್ಗೊಲೆ ಹೇಗೆ ಆಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಆರ್ಥಿಕ ಯೋಜನೆಯಲ್ಲಿ ಇದೆ. ಕನ್ನಡದ ಪೂರ್ಣ ಕಗ್ಗೊಲೆ ಇದರೊಳಗೆ ಆಗಿದೆ.

8. ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ಈ ದಿನ, ದಿನಾಂಕ 7ನೇ ಆಗಸ್ಟ್, 2003ರಂದು "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2002" ನ್ನು ವಿಧಾನ ಪರಿಷತ್ತಿನಲ್ಲಿ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 7.33ಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 08.08.2003, ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)